**All India Radio: Bangalore**
**National Bulletin In Kannada**
**15.09.2026 07.35 a.m.**
**ಆಕಾಶವಾಣಿ, ಬೆಂಗಳೂರು**

ರಾಷ್ಟ್ರೀಯ ವಾರ್ತೆಗಳು
**15.09.2026 07.35 a.m.**
****************

ಮುಖ್ಯಾಂಶಗಳು

೧. ಎರಡು ಸಾವಿರ ರೂಪಾಯಿವರೆಗಿನ ಯುಪಿಐ ವಹಿವಾಟಿಗೆ ಯಾವುದೇ ಶುಲ್ಕವಿಲ್ಲ: ಕೇಂದ್ರ ಹಣಕಾಸು ಸಚಿವಾಲಯ ಸ್ಪಷ್ಟನೆ

೨. ಇದೇ ೧೭ರಿಂದ ಸೆಮಿಕಾನ್ ಇಂಡಿಯಾ ೨೦೨೬: ಐದನೇ ಆವೃತ್ತಿ ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ

೩. ನ್ಯಾಯಾಂಗದಲ್ಲಿ ಸುಧಾರಣೆ ಮತ್ತು ಪಾರದರ್ಶಕತೆ ಅತ್ಯಗತ್ಯ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್

೪. ಗುಜರಾತ್‌ನಲ್ಲಿ ಇಂದಿನಿಂದ ವಿಶ್ವ ವರ್ತುಲ ಆರ್ಥಿಕತೆ ವೇದಿಕೆ ಕಾರ್ಯಕ್ರಮಗಳು ಆಯೋಜನೆ

೫. ಐಎಸ್‌ಎಸ್‌ಎಫ್ ಜೂನಿಯರ್ ಶಾಟ್‌ಗನ್ ವಿಶ್ವಕಪ್: ಇಟಲಿಯಲ್ಲಿ ಇಂದಿನಿಂದ ಆರಂಭ, ೨೦ ಸದಸ್ಯರ ಭಾರತ ತಂಡ ಭಾಗಿ

---

ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ ಯುಪಿಐ ಹಾಗೂ ರುಪೇ ಡೆಬಿಟ್ ಕಾರ್ಡ್‌ಗಳ ಮೂಲಕ ನಡೆಯುವ ೨ ಸಾವಿರ ರೂಪಾಯಿಗಳವರೆಗಿನ ವಹಿವಾಟುಗಳ ಮೇಲೆ ಬ್ಯಾಂಕುಗಳು ಯಾವುದೇ ರೀತಿಯ ಶುಲ್ಕ ವಿಧಿಸುವಂತಿಲ್ಲ ಎಂದು ಕೇಂದ್ರ ಸರ್ಕಾರ ಅಧಿಕೃತವಾಗಿ ಸ್ಪಷ್ಟಪಡಿಸಿದೆ.

ಈ ಡಿಜಿಟಲ್ ಪಾವತಿ ವಿಧಾನಗಳ ಮೂಲಕ ಹಣ ರವಾನಿಸುವ ಅಥವಾ ಸ್ವೀಕರಿಸುವ ವ್ಯಕ್ತಿಗಳ ಮೇಲೆ ಬ್ಯಾಂಕ್‌ಗಳು ಅಥವಾ ವ್ಯವಸ್ಥೆ ಪೂರೈಕೆದಾರರು ನೇರ ಅಥವಾ ಪರೋಕ್ಷ ಶುಲ್ಕಗಳನ್ನು ವಿಧಿಸುವುದನ್ನು ನಿಷೇಧಿಸಿ ಗೇಜೆಟ್ ಅಧಿಸೂಚನೆ ಹೊರಡಿಸಲಾಗಿದೆ.

ಹಣಕಾಸು ಸಚಿವಾಲಯವು 'ಪಾವತಿ ಮತ್ತು ಇತ್ಯರ್ಥ ವ್ಯವಸ್ಥೆಗಳ ಕಾಯ್ದೆ'ಯಡಿ ಈ ನೂತನ ಬದಲಾವಣೆ ತಂದಿದ್ದು, ೨ ಸಾವಿರ ರೂಪಾಯಿವರೆಗಿನ ಯುಪಿಐ ಮತ್ತು ರುಪೇ ವಹಿವಾಟುಗಳನ್ನು "ಎಲೆಕ್ಟ್ರಾನಿಕ್ ಪಾವತಿ ವಿಧಾನಗಳು" ಎಂದು ವರ್ಗೀಕರಿಸಿದೆ.

ವೈಯಕ್ತಿಕ ಪಾವತಿಗಳು ಸಂಪೂರ್ಣವಾಗಿ ಉಚಿತವಾಗಿರಲಿದ್ದು, ವರ್ತಕರ ಮೇಲೆಯೂ ಯಾವುದೇ ಸಮಗ್ರ ಎಂಡಿಆರ್ ಶುಲ್ಕ ಇರುವುದಿಲ್ಲ ಎಂದು ಸರ್ಕಾರ ತಿಳಿಸಿದೆ.

---

ನವದೆಹಲಿಯ ಯಶೋಭೂಮಿಯಲ್ಲಿ ಇದೇ ೧೭ ರಂದು ನಡೆಯಲಿರುವ 'ಸೆಮಿಕಾನ್ ಇಂಡಿಯಾ ೨೦೨೬'ರ ಐದನೇ ಆವೃತ್ತಿಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ.

ಮೂರು ದಿನಗಳ ಕಾಲ ಜರುಗಲಿರುವ ಈ ಬೃಹತ್ ಸಮ್ಮೇಳನದಲ್ಲಿ ೬೦೦ಕ್ಕೂ ಹೆಚ್ಚು ಪ್ರದರ್ಶಕರು, ೩೦೦ ಅಂತಾರಾಷ್ಟ್ರೀಯ ಸಂಸ್ಥೆಗಳು ಹಾಗೂ ೪೦ಕ್ಕೂ ಹೆಚ್ಚು ದೇಶಗಳ ನಿಯೋಗಗಳು ಭಾಗವಹಿಸಲಿವೆ. ೬ ಅಂತಾರಾಷ್ಟ್ರೀಯ ಮಂಟಪಗಳು, ೧೨ ರಾಜ್ಯ ಸರ್ಕಾರಗಳ ಮಂಟಪಗಳು ಹಾಗೂ ನವೋದ್ಯಮಗಳಿಗಾಗಿ 'ಸ್ಟಾರ್ಟ್‌ಅಪ್ ಪೆವಿಲಿಯನ್' ಅನ್ನು ಪ್ರದರ್ಶನದಲ್ಲಿ ಸಜ್ಜುಗೊಳಿಸಲಾಗಿದೆ.

ಭಾರತೀಯ ಸೆಮಿಕಂಡಕ್ಟರ್ ಮಿಷನ್, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಹಾಗೂ 'ಸೆಮಿ' ಸಂಸ್ಥೆಯ ಜಂಟಿ ಸಹಯೋಗದಲ್ಲಿ ಆಯೋಜಿಸಲಾಗುತ್ತಿರುವ ಈ ಕಾರ್ಯಕ್ರಮವು, ಜಾಗತಿಕ ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ವಲಯದ ಪ್ರಮುಖ ವೇದಿಕೆಯಾಗಿದೆ.

ನಾವೀನ್ಯತೆ, ಉತ್ಪಾದನೆ, ಹೂಡಿಕೆ ಹಾಗೂ ಪೂರೈಕೆ ಸರಪಳಿಯನ್ನು ಸುದೃಢಗೊಳಿಸುವ ನಿಟ್ಟಿನಲ್ಲಿ ನೂತನ ಒಪ್ಪಂದಗಳು ಮತ್ತು ತಾಂತ್ರಿಕ ಸಹಭಾಗಿತ್ವಕ್ಕೆ ಈ ಸಮಾವೇಶವು ಹಾದಿ ಕಲ್ಪಿಸಲಿದೆ.

---

ನ್ಯಾಯಾಧೀಶರ ವಿರುದ್ಧದ ದೂರುಗಳ ವಿಲೇವಾರಿಗೆ ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯಗಳು ಹೊಂದಿರುವ ವ್ಯವಸ್ಥೆಯು ಅತ್ಯಂತ ದೃಢ ಮತ್ತು ಸಮಯೋಚಿತವಾಗಿದೆ ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ ೬ ನೇ ರಾಮ್ ಜೇಠ್ಮಲಾನಿ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನ್ಯಾಯಾಂಗ ವ್ಯವಸ್ಥೆಯಲ್ಲಿ ನಿರಂತರ ಸುಧಾರಣೆ ಹಾಗೂ ಹೆಚ್ಚಿನ ಪಾರದರ್ಶಕತೆ ಕಾಯ್ದುಕೊಳ್ಳುವುದು ಅಗತ್ಯ ಎಂದಿದ್ದಾರೆ.

ನ್ಯಾಯಾಂಗದ ಕಾರ್ಯನಿರ್ವಹಣೆಯ ಮೇಲಿನ ನ್ಯಾಯಸಮ್ಮತ ಹಾಗೂ ರಚನಾತ್ಮಕ ವಿಮರ್ಶೆಯು ಪ್ರಜಾಪ್ರಭುತ್ವದ ಪ್ರಮುಖ ಅಂಗವಾಗಿದೆ ಎಂದ ಅವರು, ಸುಪ್ರೀಂ ಕೋರ್ಟ್ ಎಂದಿಗೂ ವಿಮರ್ಶೆಗೆ ವಿಮುಖವಾಗಿಲ್ಲ ಎಂದು ಸ್ಪಷ್ಟಪಡಿಸಿದರು. ನ್ಯಾಯಾಲಯಗಳು ಪರಿಶೀಲನೆ ಮತ್ತು ವಿಮರ್ಶೆಗೆ ಮುಕ್ತವಾಗಿದ್ದಾಗ ಮಾತ್ರ ಸಾರ್ವಜನಿಕರ

ವಿಶ್ವಾಸ ಗಳಿಸಲು ಸಾಧ್ಯ. ಪ್ರಕರಣದಲ್ಲಿ ಸೋತ ವ್ಯಕ್ತಿಯೂ ಸಹ ನ್ಯಾಯಾಂಗ ಪ್ರಕ್ರಿಯೆಯು ನಿಷ್ಪಕ್ಷಪಾತವಾಗಿತ್ತು ಎಂದು ನಂಬಿದಾಗ ಮಾತ್ರ ನೈಜ ಸಾರ್ವಜನಿಕ ವಿಶ್ವಾಸ ಸ್ಥಾಪನೆಯಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

---

ರಾಜಸ್ಥಾನದಲ್ಲಿ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ - ಬಿಜೆಪಿ ಭರ್ಜರಿ ಜಯ ಸಾಧಿಸಿರುವುದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಾಜ್ಯದ ಜನತೆಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿಯವರು, ಪಕ್ಷದ ಈ ಐತಿಹಾಸಿಕ ಗೆಲುವು ಸುಳ್ಳಿನ ಅಬ್ಬರದ ವಿರುದ್ಧ ಸತ್ಯಕ್ಕೆ ಸಿಕ್ಕ ಜಯವಾಗಿದೆ ಎಂದು ಬಣ್ಣಿಸಿದ್ದಾರೆ.

ಡಬಲ್ ಇಂಜಿನ್ ಸರ್ಕಾರದ ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ನೀತಿಗಳಿಗೆ ತಮ್ಮ ಸಂಪೂರ್ಣ ಬೆಂಬಲವಿದೆ ಎಂಬುದನ್ನು ರಾಜಸ್ಥಾನದ ಜನತೆ ಈ ಜನಾದೇಶದ ಮೂಲಕ ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ ಎಂದು ಪ್ರಧಾನಿ ತಿಳಿಸಿದ್ದಾರೆ. ಈ ಗೆಲುವು ರಾಜ್ಯವನ್ನು ಪ್ರಗತಿಯ ಹೊಸ ಎತ್ತರಕ್ಕೆ ಕೊಂಡೊಯ್ಯುವುದಲ್ಲದೆ, ಪ್ರತಿಯೊಬ್ಬ ನಾಗರಿಕನ ಜೀವನದಲ್ಲಿ ಸಮೃದ್ಧಿ ತರುವ ಸರ್ಕಾರದ ಸಂಕಲ್ಪವನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

---

ಭಾರತದ ಆತಿಥ್ಯದಲ್ಲಿ ವಿಶ್ವ ವರ್ತುಲ ಆರ್ಥಿಕತೆ ವೇದಿಕೆ ೨೦೨೬ರ ಕಾರ್ಯಕ್ರಮಗಳು ನಡೆಯಲಿವೆ. ಗುಜರಾತ್‌ನ ಗಾಂಧಿನಗರದಲ್ಲಿ ಇಂದಿನಿಂದ ನಾಲ್ಕು ದಿನಗಳ ಕಾಲ ಈ ಕಾರ್ಯಕ್ರಮ ನಡೆಯಲಿದೆ.

"ವರ್ತುಲ ಆರ್ಥಿಕತೆ; ಜನತೆ ಮತ್ತು ಸಮೃದ್ಧಿಗಾಗಿ ಪರಿವರ್ತನೆ "ಶೀರ್ಷಿಕೆ ಯಡಿ ಈ ವೇದಿಕೆ ಕಾರ್ಯಕ್ರಮಗಳು ಆಯೋಜಿತವಾಗಿವೆ.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಹಾಗೂ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಇಂದು ಜಂಟಿಯಾಗಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ.

ಸುಮಾರು ೬೫ ದೇಶಗಳ ೨ ಸಾವಿರಕ್ಕೂ ಅಧಿಕ ವ್ಯಾಪಾರಸ್ಥರು, ಉದ್ದಿಮೆದಾರರು, ಸಂಶೋಧಕರು, ನೀತಿ ನಿರೂಪಕರು, ಶಿಕ್ಷಣ ತಜ್ಞರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

---

ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆ ೨೦೨೬ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಧ್ರುವೀಕರಣಗೊಂಡ ಜಾಗತಿಕ ಪರಿಸ್ಥಿತಿಯ ನಡುವೆಯೂ ಶಾಂತಿ, ಭದ್ರತೆ ಮತ್ತು ಸ್ಥಿರತೆ ಕುರಿತು ಒಮ್ಮತ ಮೂಡಿದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ.

೧೧ ಸದಸ್ಯ ರಾಷ್ಟ್ರಗಳು, ೧೦ ಪಾಲುದಾರ ರಾಷ್ಟ್ರಗಳು ಸೇರಿದಂತೆ ೩೨ ನಿಯೋಗಗಳು ಶೃಂಗಸಭೆಯಲ್ಲಿ ಭಾಗವಹಿಸಿದ್ದವು. ಪಶ್ಚಿಮ-ಏಷ್ಯಾ ಸಂಘರ್ಷದಂತಹ ಪ್ರಮುಖ ವಿಷಯಗಳ ಕುರಿತು ಒಮ್ಮತ ಸಾಧಿಸಲಾಗಿದ್ದು, ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ಮತ್ತು ಪಹಲ್ಗಾಮ್ ದಾಳಿಯ ಖಂಡನೆಗೆ ಬ್ರಿಕ್ಸ್ ಒತ್ತು ನೀಡಿದೆ ಎಂದು ಅವರು ಹೇಳಿದ್ದಾರೆ.

---

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ಇಂದು ಬೆಂಗಳೂರಿಗೆ ಭೇಟಿ ನೀಡುತ್ತಿದ್ದಾರೆ.

ಇಂದು ಮಧ್ಯಾಹ್ನ ಮಲ್ಲೇಶ್ವರಂನ ಬಿಜೆಪಿ ಪ್ರಧಾನ ಕಾರ್ಯಾಲಯ ಜಗನ್ನಾಥಭವನದಲ್ಲಿ ಪ್ರಧಾನಿ ಅವರ ೨೫ ವರ್ಷಗಳ ಸಾರ್ವಜನಿಕ ಜೀವನದ ಸ್ಮರಣಾರ್ಥ ಆಯೋಜಿಸಲಾಗುತ್ತಿರುವ ಸೇವಾ ಸಂಕಲ್ಪ ಅಭಿಯಾನದ ಕುರಿತು ಸುದ್ದಿಗೋಷ್ಠಿ ನಡೆಸಿ ಮಾಹಿತಿ ಹಂಚಿಕೊಳ್ಳಲಿದ್ದಾರೆ.

---

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು, ಮೂರು ದಿನಗಳ ಭೇಟಿಗಾಗಿ ಭೂತಾನ್‌ಗೆ ತೆರಳಿದ್ದಾರೆ. ಇಂದು ನಡೆಯಲಿರುವ ಭೂತಾನ್ ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಅವರು ಭಾಗವಹಿಸಲಿದ್ದಾರೆ.

ಭೇಟಿಯ ಸಂದರ್ಭದಲ್ಲಿ ಅವರು ಭೂತಾನ್ ರಾಜರನ್ನು ಭೇಟಿಯಾಗಲಿದ್ದು, ಪ್ರಧಾನಮಂತ್ರಿಯವರನ್ನೂ ಭೇಟಿ ಮಾಡಲಿದ್ದಾರೆ.

---

ನೇಪಾಳ ವಿದ್ಯುತ್ ಪ್ರಾಧಿಕಾರಕ್ಕೆ ಈ ವರ್ಷದ ಡಿಸೆಂಬರ್ ೩೧ರವರೆಗೆ ಪ್ರತಿದಿನ ೧೮ ಗಂಟೆಗಳ ಕಾಲ ವಿದ್ಯುತ್ ಪೂರೈಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ವಿದ್ಯುತ್ ಸಚಿವಾಲಯದ ಪ್ರಕಾರ, ಮುಜಫರ್‌ಪುರ-ಢಾಲ್ಕೇಬರ್ ಮಾರ್ಗದ ಮೂಲಕ ಗರಿಷ್ಠ ೬೦೦ ಮೆಗಾವ್ಯಾಟ್ ಹಾಗೂ ಟನಕ್‌ಪುರ-ಮಹೇಂದ್ರನಗರ ಮಾರ್ಗದ ಮೂಲಕ ೫೪ ಮೆಗಾವ್ಯಾಟ್‌ವರೆಗೆ ವಿದ್ಯುತ್ ವಿತರಿಸಲು ಅನುಮತಿ ನೀಡಲಾಗಿದೆ.

ಇತ್ತೀಚೆಗೆ ಸಂಭವಿಸಿದ ಪ್ರವಾಹದಿಂದ ನೇಪಾಳದ ಜಲವಿದ್ಯುತ್ ಮೂಲಸೌಕರ್ಯಕ್ಕೆ ವ್ಯಾಪಕ ಹಾನಿಯಾಗಿದ್ದು, ದೇಶೀಯ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಕುಸಿದಿದೆ. ಇದರಿಂದ ನೇಪಾಳದಲ್ಲಿ ಹೆಚ್ಚುವರಿ ವಿದ್ಯುತ್ ಅಗತ್ಯ ಉಂಟಾಗಿದೆ.

______________

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವವರಿಗೆ ತ್ವರಿತ ಹಾಗೂ ಉತ್ತಮ ನೆರವು ಒದಗಿಸುವ ಉದ್ದೇಶದಿಂದ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ತನ್ನ ೧೦೩೩ ರಾಷ್ಟ್ರೀಯ ಹೆದ್ದಾರಿ ಸಹಾಯವಾಣಿಯನ್ನು ಸುಧಾರಿತ ತಂತ್ರಜ್ಞಾನಗಳೊಂದಿಗೆ ಉನ್ನತೀಕರಿಸಲಿದೆ.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪ್ರಕಾರ, ಉನ್ನತೀಕರಿಸಲಾದ ೧೦೩೩ ಸಹಾಯವಾಣಿಯಲ್ಲಿ ಕೃತಕ ಬುದ್ಧಿಮತ್ತೆ, ನೈಜ-ಸಮಯದ ಸ್ಥಳ ಪತ್ತೆ ಹಾಗೂ ಸ್ಮಾರ್ಟ್ ತುರ್ತು ಪ್ರತಿಕ್ರಿಯೆ ವ್ಯವಸ್ಥೆಗಳನ್ನು ಬಳಸಲಾಗುತ್ತದೆ. ಇದರಿಂದ ಕರೆ ಮಾಡುವವರ ಸ್ಥಳವನ್ನು ನಿಖರವಾಗಿ ಗುರುತಿಸುವುದು, ವಿವಿಧ ಭಾರತೀಯ ಭಾಷೆಗಳಲ್ಲಿ ಕರೆಗಳನ್ನು ಅರ್ಥೈಸಿಕೊಳ್ಳುವುದು ಹಾಗೂ ಅಗತ್ಯ ನೆರವನ್ನು ತ್ವರಿತವಾಗಿ ಸ್ಥಳಕ್ಕೆ ರವಾನಿಸಲು ಸಾಧ್ಯವಾಗಲಿದೆ.

______________

ಏಷ್ಯನ್ ಟ್ರ್ಯಾಪ್ ಚಾಂಪಿಯನ್ ಸಬೀರಾ ಹ್ಯಾರಿಸ್ ನಾಯಕತ್ವದ ೨೦ ಸದಸ್ಯರ ಭಾರತೀಯ ಶೂಟಿಂಗ್ ತಂಡವು, ಇಟಲಿಯ ಪೋರ್ಪೆಟ್ಟೊದಲ್ಲಿ ಇಂದಿನಿಂದ ಆರಂಭವಾಗಲಿರುವ 'ಐಎಸ್‌ಎಸ್‌ಎಫ್ ಜೂನಿಯರ್ ಶಾಟ್‌ಗನ್ ವಿಶ್ವಕಪ್' ಕೂಟದಲ್ಲಿ ಸ್ಪರ್ಧಿಸಲಿದೆ.

ಇದೇ ೧೯ ರವರೆಗೆ ನಡೆಯಲಿರುವ ಈ ಕೂಟದಲ್ಲಿ ಭಾರತೀಯ ತಂಡವು ಪುರುಷ ಹಾಗೂ ಮಹಿಳಾ ವಿಭಾಗಗಳ ಟ್ರ್ಯಾಪ್, ಸ್ಕೀಟ್ ಮತ್ತು ಮಿಶ್ರ ಟ್ರ್ಯಾಪ್ ಸೇರಿದಂತೆ ಒಟ್ಟು ಐದು ಪದಕ ವಿಭಾಗಗಳಲ್ಲಿ ಕಣಕ್ಕಿಳಿಯಲಿದೆ. ಪ್ರಮುಖ ಪದಕ ನಿರೀಕ್ಷೆಯಾಗಿರುವ ಸಬೀರಾ ಹ್ಯಾರಿಸ್ ಜೊತೆಗೆ ಝುಹೇರ್ ಖಾನ್ ಮತ್ತು ಆದ್ಯಾ ಕಾತ್ಯಾಲ್ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ.

ಈ ಪಂದ್ಯಾವಳಿಯಲ್ಲಿ ೩೦ ದೇಶಗಳ ಒಟ್ಟು ೨೧೮ ಶೂಟರ್‌ಗಳು ಭಾಗವಹಿಸುತ್ತಿದ್ದಾರೆ. ಕಳೆದ ಏಪ್ರಿಲ್‌ನಲ್ಲಿ ಕೈರೋದಲ್ಲಿ ನಡೆದ ಜೂನಿಯರ್ ವಿಶ್ವಕಪ್‌ನಲ್ಲಿ ೫ ಚಿನ್ನ ಸೇರಿದಂತೆ ೧೬ ಪದಕಗಳನ್ನು ಗೆದ್ದಿದ್ದ ಭಾರತೀಯ ಶೂಟರ್‌ಗಳು, ಈ ಬಾರಿಯೂ ಅತ್ಯುತ್ತಮ ಪ್ರದರ್ಶನದ ನಿರೀಕ್ಷೆಯಲ್ಲಿದ್ದಾರೆ.

______________

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಎರಡನೇ ಟಿ-೨೦ ಪುರುಷರ ಪಂದ್ಯದಲ್ಲಿ ಭಾರತ ಮತ್ತು ಅಫ್ಘಾನಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

ಮೂರು ಪಂದ್ಯಗಳ ಸರಣಿಯಲ್ಲಿ ಭಾರತ ೧-೦ ಮುನ್ನಡೆಯಲ್ಲಿದೆ. ಸರಣಿಯ ಮೂರನೇ ಪಂದ್ಯ ಇದೇ ೧೭ ರಂದು ನಡೆಯಲಿದೆ.

_______ ಮುಕ್ತಾಯ ______